ನಮಗೆ ಸಿಗುವುದಾದರೂ ಏನು? ಕೆಲವು ಅನುಕೂಲಗಳು ಮತ್ತು ಮನಸ್ಸಿನ ತೃಪ್ತಿ. ಸಸ್ಯದಲ್ಲೂ ಜೀವವಿದೆ ಎಂದು ಹೇಳುವುದು ಮತ್ತು ನಂಬುವುದು ಒಳ್ಳೆಯದು. ಆದರೆ ಅದಕ್ಕೆ ನೋವಾಗುತ್ತದೆ ಎಂದು ಕತ್ತರಿಸದೇ ಇರಲಾದೀತೇ? ಪೆನ್ನು, ಟ್ರೇ, ಕುರ್ಚಿ, ಮೇಜು ಎಲ್ಲದರಲ್ಲೂ ನಾವು ಜೀವ ಕಾಣುತ್ತ ಕಾಣುತ್ತ ಕೊನೆಗೆ ನಮ್ಮ ಸ್ವಭಾವಗಳನ್ನೂ ಆರೋಪಿಸಿ ಬಿಟ್ಟರೆ? ಬಹುಶಃ ಮುಂದಿನ ಹಂತ ಇದೇ ಎಂದು ಕಾಣುತ್ತದೆ.



ಇಷ್ಟು ಹೇಳಿದ ಮೇಲೆ ನಿಮ್ಮಲ್ಲಿ ಯಾರಿಗಾದರೂ ಒಂದು ತುಂಟತನದ ಕಲ್ಪನೆ ಬಂದಿರಬಹುದು. ಹೇಗಿದ್ದರೂ ವೀಣೆ, ಸಿತಾರ್ ಕೊಳಲುವಿನಂತಹ ವಾದ್ಯಗಳಿಗೆ ಕುಂಡಲಿ ಬರೆಯುವುದಾದಲ್ಲಿ ಅವುಗಳಿಗೇ ಏಕೆ ಮದುವೆ ಮಾಡಬಾರದು? ಎಂದು. ಹೇಗಿದ್ದರೂ ಜೀವ ಕೊಡಿ ಎಂದು ಅವು ಕೇಳಿಲ್ಲ, ಮದುವೆ ಮಾಡಬೇಡಿ ಎಂದೂ ಅವು ಹೇಳಿಲ್ಲ. ಇದೂ ನಮ್ಮ ಮನಸ್ಸೇ ತಾನೇ? ಮಾಡಿಸಿ ಬಿಟ್ಟರಾಯಿತು. ಇದಲ್ಲವೇ ಮನುಷ್ಯ ಬುದ್ಧಿ. ಆದರೆ ಗೋತ್ರ, ಜಾತಿ, ಧರ್ಮ, ಪಂಗಡ ಇತ್ಯಾದಿ ಸಮಸ್ಯೆಗಳು **at least** ಇಲ್ಲಾದರೂ ಇರದಿದ್ದಲ್ಲಿ ಯಾರಾದರೂ ಪ್ರಯತ್ನಿಸಬಹುದೇನೋ. ಇವು ಶುರುವಾದರೆ ಮತ್ತೆ ವರದಕ್ಷಿಣೆ, ವಿಚ್ಛೇದನ, ಆತ್ಮಹತ್ಯೆ, ಮರ್ಯಾದೆ ಹತ್ಯೆಗಳೂ ಶುರುವಾದಾವು. ಹಾಗಾಗಿ ಜೀವ ಮಾತ್ರ ಸಾಕು. ಸಂಬಂಧ ಮಾತ್ರ ಬೇಡ ಅನ್ನೋ ತೀರ್ಮಾನಕ್ಕೆ ನಾವು ಬರಬಹುದು. ಆದರೆ ಜಗತ್ತು ಏನು ನಮ್ಮ ಮಾತುಕೇಳಿ ನಡೆಯುತ್ತದೆಯೇ? ನೀವಿನ್ನು 'ವೀಣೆಗೂ ಕೊಳಲಿಗೂ ಮದುವೆ ಡುಂ ಡುಂ' ಅಂತ ತಮಾಷೆಯಾಗಿ ಹೇಳಬಹುದೇನೋ ಎಂದು ಭಾವಿಸುತ್ತಿರುವಲ್ಲೇ ಜಪಾನಿನಲ್ಲಿ ಒಬ್ಬ ಹೀಗೇ ಮದುವೆ ಮಾಡಿಕೊಂಡಿದ್ದಾನೆ ಗೊತ್ತಾ?

ಅಖಿಕೊ ಕೊಂಡೋ ಅಂತ ಅವನ ಹೆಸರು. ಅವನು ಮದುವೆಯಾಗಿರುವುದು ಹೋಲೋಗ್ರಾಮ್ ಜೊತೆ. ಇದನ್ನು ಸ್ವಲ್ಪ ವಿವರಿಸಬೇಕು. 'ನೀವು ಮಾತನಾಡುವ ಗೊಂಬೆ' ನೋಡಿದ್ದೀರಲ್ಲ, ಹಾಗೆ. ಆದರೆ ಇದು ಕೈಗೆ ಸಿಗದ ಗೊಂಬೆ. ಶೀಸೆಯಂತಹ ಯಾಂತ್ರಿಕ ಸಾಧನದೊಳಗೆ ಫೋಟೊವೊಂದನ್ನು ಬಿಂಬವಾಗಿಸಿ ಮೂರು ಆಯಾಮಗಳಲ್ಲಿ ಅದು ಕಾಣುವಂತೆ ಅಡಕವಾಗಿಸಲಾಗಿರುತ್ತೆ. ಅಂದರೆ ತ್ರೀ ಡಿ ಎಫೆಕ್ಟ್. ಇಲ್ಲಿ ಅರ್ಥವಾಗದವರು ನೆಟ್‌ನಲ್ಲಿ ಅಂತಹ ಅಡಕ ಬಿಂಬಗಳ ಚಲನಾ ವಿನ್ಯಾಸ ನೋಡಿ ತಿಳಿಯಬಹುದು. ಅಖಿಕೋ ಕೊಂಡೋ ತಾನೇ